ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವರನ್ನು ವಿಚಾರಣೆ ಮಾಡಿದ್ದರಲ್ಲಿ ಅದು ವ್ಯಕ್ತವಾಯಿತು.

Sri T. SUBRAMANYA.—Was any enquiry held about it?

Sri R. CHENNIGARAMIAH.—An enquiry was held and we were satisfied that he did not do it intentionally.

Sri T. SUBRAMANYA.—Who held the enquiry?

Sri R. CHENNIGARAMIAH.—We have got our own Government agency to hold an enquiry and they have been satisfied.

Sri T. SUBRAMANYA.—I suppose that information as to who held the enquiry is not confidential.

Sri R. CHENNIGARAMIAH.—It is the Deputy Commissioner. It is known to everybody.

Sri T. SUBRAMANYA.—I refer to the particular instance whether the Deputy Commissioner of Chitaldrug District held an enquiry. The Hon'ble Minister may say either 'yes' or 'no.'

Sri R. CHENNIGARAMIAH.—Yes and he reported the matter to the Government.

Sri T. SUBRAMANYA.—If unintentionally an officer of Government does anything wrong, he will not be dealt with, I suppose.

Sri M. N. JOIS *alias* M. N. NARASIMHAIYA (Mysore District—General)—The question is hypothetical, Sir.

ಶ್ರೀ ಟಿ. ಹನುಮಯ್ಯನವರು.—ಹನ್ನೊಂದು ಮುನಿಸಿಪಾಲಿಟಿಗಳಿಗೆ ಮಾತ್ರ ಜೀವದಾನ ಕೊಟ್ಟು ಉಳಿದವುಗಳಿಗೆ ಕೊಡದಿರಲು ಕಾರಣವೇನು?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವಶ್ಯಕತೆ ಇರಲಿಲ್ಲ; ಆದ್ದರಿಂದ ಕೊಡಲಿಲ್ಲ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ಉಳಿದವುಗಳಿಗೆ ಹೆಚ್ಚಿನ ಆವಶ್ಯಕತೆಯಿರಲಿಲ್ಲವೆ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವಶ್ಯಕತೆಯಿಲ್ಲದೆ ಯಾವುದೂ ಆಗುವುದಿಲ್ಲ.

ಶ್ರೀ ಟಿ. ಹನುಮಯ್ಯನವರು.—ಉಳಿದವರು ಕೇಳಲಿಲ್ಲವೆ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಪ್ರತಿಯೊಬ್ಬರೂ ಕೇಳಬಹುದು, ಆದರೆ ಅದಕ್ಕೆ ಸಾಕಷ್ಟು ಕಾರಣವಿರಬೇಕು ಮತ್ತು ಜಿಲ್ಲಾಧಿಕಾರಿಗಳು ತೃಪ್ತಿಪಡಿಸಿರಬೇಕು.

ಶ್ರೀ ಟಿ. ಹನುಮಯ್ಯನವರು.—ಹನ್ನೊಂದಕ್ಕೆ ಕಾರಣವಿದೆ, ಬಾಕಿಯುದಕ್ಕೆ ಇಲ್ಲ ಎಂದು ಹೇಳುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು, ಅದನ್ನು ಆಗಲೇ ಹೇಳಿದೆ.

ಶ್ರೀ ಟಿ. ಹನುಮಯ್ಯನವರು.—ಆ ಮುನಿಸಿಪಾಲಿಟಿಗಳಿಗಿರುವ ತೊಂದರೆ ಇತರ ಮುನಿಸಿಪಾಲಿಟಿಗಳಿಗಿಲ್ಲವೆಂದು ಹೇಳುತ್ತೀರಾ?

ಶ್ರೀ ಆರ್ ಚೆನ್ನಿಗರಾಮಯ್ಯನವರು.—ಹೌದು.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ಮುನಿಸಿಪಲ್ ಕಾನೂನು ಮೈಸೂರು ದೇಶಕ್ಕೆಲ್ಲಾ ಒಂದೇ ರೀತಿ ಇದೆಯೋ ಅಥವಾ 11ಕ್ಕೆ ಮಾತ್ರ ಒಂದು ರೀತಿ, ಉಳಿದವಕ್ಕೆ ಬೇರೆ ರೀತಿ ಇದೆಯೋ?

(ಉತ್ತರವಿಲ್ಲ)

Mr. SPEAKER.—Question time is over.

Request for permission to discuss Special Resolution *re*: discharge of Mysore Military personnel handed over to the Centre.

ಮುಷಿರ್-ಉಲ್-ಮುಲ್ಕ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು-ಮುಸ್ಲಿಂ)—ನಾನು ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಿನ್ನೆ ದಿವಸ ಮೈಸೂರು ಮಿಲಿಟರಿ ಯನ್ನು ಇಂಡಿಯಾ ಸರ್ಕಾರಕ್ಕೆ ಕಳುಹಿಸಿರುವ ವಿಚಾರದಲ್ಲಿ ಕೆಲವು ಸಲಹೆಗಳನ್ನು ಮಂತ್ರಿಮಂಡಲಕ್ಕೆ ಕೊಡಬೇಕೆಂದು ಒಂದು ವಿಶೇಷ ನಿರ್ಣಯವನ್ನು ಕಳುಹಿಸಿದ್ದೇನೆ. ಮಂತ್ರಿಗಳಿಗೂ ಆ ವಿಚಾರವನ್ನು ಹೇಳಿದ್ದೇನೆ. ಅದು ಬಹಳ ಜರೂರಾದ ವಿಷಯ. ಸರ್ಕಾರಕ್ಕೂ ಸಲಹೆ ಕೊಡುವುದರಿಂದ ಅನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ಅದನ್ನು ಚರ್ಚಿಸಲು ಅವಕಾಶಕೊಟ್ಟರೆ ಒಳ್ಳೆಯದು.

Mr. SPEAKER.—It will be examined.

ಜನಾಬ್ ಜೆ. ಮಹಮದ್ ಇಮಾಂರವರು.—ನೆನ್ನೆಯ ದಿನ ನಾನು ಒಂದು ಅಲ್ಪ ಕಾಲಾವಧಿ ಪ್ರಶ್ನೆ ಕಳುಹಿಸಿದ್ದರ ವಿಚಾರವು ಇನ್ನೂ ತಿಳಿಯಲಿಲ್ಲ. ಹೋದ ಅಧಿವೇಶನದಲ್ಲಿ ಎಕ್ಸೈಜು ವಿಚಾರಕ್ಕೆ ಸಂಬಂಧಪಟ್ಟ ಒಂದು ಅಲ್ಪಕಾಲಾವಧಿ ಪ್ರಶ್ನೆ ಕಳುಹಿಸಿದ್ದೆ. ಅದು ಏನಾಯಿತೆಂಬುದೂ ಸಹ ಇದುವರೆಗೂ ತಿಳಿಯಲಿಲ್ಲ. ಆದ್ದರಿಂದ ಈಗಲೂ ಅದೇ ರೀತಿ ಆಗದೇ ಇರಲಿ ಎಂಬ ಉದ್ದೇಶದಿಂದ ನಾನು ಇದನ್ನು ಇಷ್ಟು ಒತ್ತಾಯದಿಂದ ಕೇಳುತ್ತಿದ್ದೇನೆ. ಬಹುಶಃ ಅವನ್ನು ತಾವು ಮಂತ್ರಿಗಳಿಗೆ ಕಳುಹಿಸಿರಬಹುದು. ಸಾಧಾರಣವಾಗಿ ಯಾವುದಾದರೂ ಪ್ರಶ್ನೆ, ನಿರ್ಣಯ ವಗೈರೆ ಕೊಟ್ಟರೆ, ಅದರ ವಿಚಾರವೇನಾಯಿತೆಂಬುದನ್ನು ಅಧ್ಯಕ್ಷರು ತಿಳಿಸಬೇಕಾದ್ದು ಅವಶ್ಯಕ ಈಗ ನಾನು ಅಲ್ಪಕಾಲಾವಧಿ ಪ್ರಶ್ನೆ ಕಳುಹಿಸಿ ಮೂರು ದಿವಸವಾಯಿತು. ನಾಳೆ ಅಧಿವೇಶನದ ಕಡೆಯ ದಿವಸವಾದರೆ ಅಷ್ಟರೊಳಗೆ ಅದು ಬಾರದೇ ಹೋದರೆ ಮುಂದಿನ ಅಧಿವೇಶನ ಬರುವವರೆಗೆ ಆ ವಿಚಾರ ಬರಲು ಅವಕಾಶವಿರುವುದಿಲ್ಲ.

Mr. SPEAKER.—But the resolution even if admitted can only be taken up tomorrow.

ಜನಾಬ್ ಜೆ. ಮಹಮದ್ ಇಮಾಂರವರು.—ಅದಕೆ ಅವಕಾಶ ಕೊಟ್ಟಿದೆಯೆ, ಆಥವಾ ಇಲ್ಲವೇ ಎಂಬುದನ್ನು ಸದನ್ಯರಿಗೆ ತಿಳಿಸಿದರೆ ಅನುಕೂಲ; ಅದನ್ನು ಓದಿಕೊಂಡು ವಿಷಯ ಸಂಗ್ರಹಿಸಲು ಅವಕಾಶವಿರುತ್ತದೆ. ಇಲ್ಲದಿದ್ದರೆ ಒಂದು ವೇಳೆ ಲ್ಯಾಪ್ಸ್ ಆದರೆ ನಿರರ್ಥಕವಾಗುತ್ತದೆ. ಆದ್ದರಿಂದ ಅದನ್ನು ತಕ್ಷಣವೇ ಈ ದಿವಸವೇ ತಿಳಿಸಬೇಕೆಂದು ಪ್ರಾರ್ಥನೆ.